# ಪರ್ಯಾಯ ಶೈಕ್ಷಣಿಕಯೋಜನೆ2021–22

ತರಗತಿ: 4　　　　ಮಾಹೆ : ಮಾರ್ಚ್　　　　ವಿಷಯ : ಕನ್ನಡ ದ್ವಿತೀಯ ಭಾಷೆ

| ಕ್ರಮ ಸಂಖ್ಯೆ | ತಿಂಗಳು/ ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 01 | ಮೊದಲನೇ ವಾರ ಮತ್ತ ಎರಡನೇ ವಾರ | **ನಾವು ಸಮಾನರು**<br>**ಕ್ಷೇತ್ರ** – ಓದುವುದು ಮತ್ತು ಬರೆಯುವುದು.<br>**ಸಾಮರ್ಥ್ಯ** –<br>• ಗಾದೆ ಮಾತುಗಲನ್ನು ಶುಭನುಡಿಗಳನ್ನೋದಿ ಬರೆಯುವರು.<br>• ಒಂದೊಂದೇ ಮರದ ಪಾತ್ರ ವಹಿಸಿ ಪಠ್ಯವನ್ನು ಸ್ಪಷ್ಟವಾಗಿ ಸ್ವರಭಾರದೊಂದಿಗೆ ಓದುವರು. | ಒಂದೆ ಒಂದೆ ಒಂದೇ ನಾವೆಲ್ಲರೂ ಒಂದೇ<br>ಈ ದೇಶದೊಳೆಲ್ಲಿದ್ದರು ಭಾರತ ನಮಗೊಂದೆ<br>-------- ಈ ಗೀತೆಯನ್ನು ಹೇಳಿಸುವರು.<br>• ಮಕ್ಕಳಿಂದ ಚಾರ್ಟ್‌ನಲ್ಲಿರುವ ಮತ್ತು ಕಪ್ಪು ಹಲಗೆ ಮೇಲೆ ಬರೆದ ಗಾದೆ ಮಾತುಗಳನ್ನು , ಶುಭನುಡಿಗಳನ್ನು ಓದಿಸುವುದು.<br>• ಗಾದೆ ಮಾತುಗಳು ಮತ್ತು ಶುಭನುಡಿಗಳನ್ನು ಕಾಪಿ ಪುಸ್ತಕದಲ್ಲಿ ಸರಿಯಾದ ಅಂತರ ಮತ್ತು ಸರಿಯಾದ ಪ್ರಮಾಣದಲ್ಲಿ ಬರೆಯುವರು.<br>• ಶಿಕ್ಷಕರು ಪಠ್ಯದ ಒಂದೊಂದೇ ಮರದ ಸಂಭಾಷಣೆಯನ್ನು ಸ್ವರಭಾರದೊಂದಿಗೆ ಲೇಖನ ಚಿಹ್ನೆಗಳಿಗನುಗುಣವಾಗಿ ಓದುವರು.<br>• ಹಣ್ಣು , ಮರ ಅವುಗಳ ಮಾತುಗಳನ್ನು ಕುರಿತು ವಿವರಿಸುವರು. | • ಅಭಿನಯದೊಂದಿಗೆ ಗೀತೆ ಹೇಳುವರು.<br>• ಅಭ್ಯಾಸದ ಹಾಳೆ–1 |

| | | | | |
|---|---|---|---|---|
| 02 | **ಮೂರನೇ ಮತ್ತು ನಾಲ್ಕನೇ ವಾರ** | • ಸರಿಯಾದ ಗಾತ್ರ , ಪ್ರಮಾಣ, ಮತ್ತು ಅಂತರದೊಂದಿಗೆ ಬರೆಯುವರು.<br>• ಕ್ರಮವಾಗಿ ಬಿಟ್ಟ ಪದಗಳನ್ನು , ವಾಕ್ಯಗಳನ್ನು ಅಂದವಗಿ ಬರೆಯುವರು. | • ಪ್ರತಿಯೊಂದು ಮರದ ಉಪಯೋಗ ತಿಳಿಸುವರು.<br>• ನಾಹೆಚ್ಚು ನಾಹೆಚ್ಚು ಎಂಬ ದುರಭಿಮಾನ ಬಿಟ್ಟು ಸಮಾನತೆಯಿಂದ ಬಾಳಬೇಕೆಂಬ ಮೌಲ್ಯವನ್ನು ಮಕ್ಕಳಿಗೆ ತಿಳಿಸುವರು.<br>• ಮಕ್ಕಳು ಒಂದೊಂದೇ ಮರದ ಪಾತ್ರ ವಹಿಸಿಕೊಂಡು ಪಠ್ಯಭಾಗವನ್ನು ಸ್ವರಭಾರದೊಂದಿಗೆ ಓದುವರು.<br>• ತಮಗೆ ತಿಳಿದಷ್ಟು ಪ್ರತಿ ಹಣ್ಣಿನ ವಿವರಣೆ ನೀಡುವರು.<br>• ಹಣ್ಣಿನ ಬಣ್ಣ ,ರುಚಿ,ಆಕಾರ, ಗಾತ್ರ, ಉಪಯೋಗ ಕುರಿತು ಹೇಳುವರು.<br>• ಚಟುವಟಿಕೆ: ತಮಗಿಷ್ಟವಾದ ಹಣ್ಣಿನ ಮರದ ಚಿತ್ರ ಬಿಡಿಸಿ, ಆ ಮರದ ಹೇಳಿಕೆಗಳನ್ನು ಅಂದವಾಗಿ ಪ್ರಮಾಣ ಮತ್ತು ಅಂತರದೊಂದಿಗೆ ಬರೆಯುವರು.<br>ಚಟುವಟಿಕೆ :– ಪದದಲ್ಲಿ ಬಿಟ್ಟಿರುವ ಅಕ್ಷರ ಮತ್ತು ವಾಕ್ಯದಲ್ಲಿ ಬಿಟ್ಟಿರುವ ಪದಗಳನ್ನು ಗುರುತಿಸಿ ತುಂಬಿ ಬರೆಯುವರು.<br>ಚಟುವಟಿಕೆ: ಕೊಟ್ಟಿರುವ ವಾಕ್ಯಗಳನ್ನು ಅಂದವಾಗಿ ನಕಲು ಮಾಡಿ ಬರೆಯುವರು.<br>ವಿವಿಧ ರೀತಿಯ ಮರಗಳ ಉಪಯೋಗ ಕುರಿತು ಬರೆಯುವರು ಮತ್ತು ಓದುವರು. | • ಅಭ್ಯಾಸದ ಹಾಳೆ–2 |

| | | | | |
|---|---|---|---|---|
| | | <br><br><br><br>• ಲೇಖನ ಚಿಹ್ನೆಗಳನ್ನು ಬಳಸಿ ಬರೆಯುವರು.<br><br><br>• ವ್ಯಾಕರಣ | ಚಟುವಟಿಕೆ;– ಮರದಿಂದ ತಯಾರಿಸುವ ವಸ್ತುಗಳ ಪಟ್ಟಿ ಮಾಡುವರು.<br>ಚಟುವಟಿಕೆ ;– ತೆಂಗಿನಮರದ ಪ್ರತಿ ಭಾಗದ ಉಪಯೋಗ ಬರೆಯುವುದು.<br>• ಕೊಟ್ಟಿರುವ ಗದ್ಯ ಭಾಗಕ್ಕೆ ಲೇಖನ ಚಿಹ್ನೆ ಹಾಕಲು ಅಭ್ಯಾಸ ಮಾಡಿಸುವುದು ಮತ್ತು ಮಕ್ಕಳಿಂದ ಹಾಕಿಸುವುದು.<br>• ಲೇಖನ ಚಿಹ್ನೆಗಳನ್ನು ಗುರುತಿಸುವರು ಹೇಳುವರು, ಯಾವಾಗ ಯಾವ ಚಿಹ್ನೆ ಬಳಸಬೇಕು ಎಂದು ತಿಳಿಯುವರು. ಸೂಚನೆ ಅನುಸರಿಸಿ ಸರಿಯಾದ ಪದ ಬರೆಯುವರು. ವಾಕ್ಯದಲ್ಲಿ ತಪ್ಪಾದ ಅಕ್ಷರವನ್ನು ಸರಿಪಡಿಸಿ ಬರೆಯುವರು, ವಿರುದ್ಧಪದ, ವಚನ ಬದಲಿಸು, ಶುಭನುಡಿ ಬರೆಸುವರು. | |

**ಅಭ್ಯಾಸ ಹಾಳೆ–1**

**ತರಗತಿ: 4** | **ನಾವು ಸಮಾನರು** | **ವಿಷಯ: ದ್ವಿತೀಯ ಭಾಷೆ ಕನ್ನಡ**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ:**

1. ಉದ್ಯಾನವನದಲ್ಲಿನ ಗಿಡ ಮರಗಳು ಏನೆಂದು ಮಾತನಾಡಿಕೊಂಡವು ?

   ________________________________________________

2. ಕೊಬ್ಬರಿ ಎಣ್ಣೆ ಯಾವುದರಿಂದ ಮಾಡುತ್ತಾರೆ ?

   ________________________________________________

3. ಬಾಳೆಯ ಎಲೆ ಯಾವುದಕ್ಕೆ ಉಪಯೋಗ ?

   ________________________________________________

**ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು :**

1. “ಎಲ್ಲರೂ ನನ್ನ ಹಣ್ಣಿಗಾಗಿ ಮುಗಿ ಬೀಳುತ್ತಾರೆ.”
   ಯಾರು ಹೇಳಿದರು ? ________________________________

   ಯಾರಿಗೆ ಹೇಳಿದರು ? ________________________________
2. “ನಾನು ಕೊಡುವ ಹಣ್ಣು ನಾಲ್ಕಾರು ಜನರಿಗೆ ಸಾಕು.”
   ಯಾರು ಹೇಳಿದರು ? ________________________________

   ಯಾರಿಗೆ ಹೇಳಿದರು ? ________________________________
3. “ಛೀ ಬಿಡು! ನಿನ್ನ ಹಣ್ಣು ಮುಟ್ಟಿದರೆ ಮುಳ್ಳು.”
   ಯಾರು ಹೇಳಿದರು ? ________________________________

   ಯಾರಿಗೆ ಹೇಳಿದರು ? ________________________________

**ಆವರಣದಲ್ಲಿ ಕೊಟ್ಟಿರುವ ಪದಗಳನ್ನು ಸರಿಯಾದುದನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ:**

1. ನಾನು ನಿಮ್ಮೆಲ್ಲರ ____________________ ( ಕಿರಿ ಮಾವ, ಅಳಿಯ, ಹಿರಿಮಾವ )
2. ನಾನು ಮಾನವರಿಗೆ __________________ ( ಕಾಮಧೇನು, ಕಲ್ಪವೃಕ್ಷ, ಐರಾವತ )
3. ನಾನು ವರ್ಷದ ___________ ತಿಂಗಳು ಹಣ್ಣು ಬಿಡುತ್ತೇನೆ. (ಮೂರು, ಹನ್ನೆರಡು, ಆರು )

**ಅಭ್ಯಾಸ ಹಾಳೆ–2**

**ತರಗತಿ: 4** **ನಾವು ಸಮಾನರು** **ವಿಷಯ: ದ್ವಿತೀಯ ಭಾಷೆ ಕನ್ನಡ**

**ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ;**

1. ತೆಂಗಿನ ಮರ ಕಲ್ಪವೃಕ್ಷ ಹೇಗೆ ?

______________________________________________________________

______________________________________________________________ .

2. ಬಾಳೆಯ ಉಪಯೋಗಗಳನ್ನು ಪಟ್ಟಿ ಮಾಡಿರಿ .

______________________________________________________________

______________________________________________________________ .

**ಕೊಟ್ಟಿರುವ ವಾಕ್ಯದಲ್ಲಿ ಗೆರೆ ಎಳೆದ ಪದದ ಸರಿಯಾದ ರೂಪ ಬರೆಯಿರಿ.**

1. <u>ಅಲಸಿನ</u> ಹಣ್ಣು ತಿನ್ನಲು <u>ರುಛಿ</u>ಯಾಗಿರುತ್ತದೆ.

______________________________________________________________

2. ನಾನು ಮನುಷ್ಯರಿಗೆ <u>ಕಲ್ಪಋುಕ್ಷ</u>

______________________________________________________________

3. ಪ್ರಾಣಿಗಳ <u>ಹುಸಿರಾಟಕ್ಕೆ</u> ಆಮ್ಲಜನಕ ಬೇಕು.

______________________________________________________________

**ಕೊಟ್ಟಿರುವ ಸೂಚನೆಯನ್ನು ಅನುಸರಿಸಿ ಪದಗಳಲ್ಲಿರುವ ಮಧ್ಯದ ಅಕ್ಷರವನ್ನು ಬದಲಾಯಿಸಿ ಹೊಸ ಪದಗಳನ್ನು ಮಾಡಿರಿ.**

1. ಹವಳ (ತಿನ್ನಲು ಕರ್‍ರಂ. . . ಕರ್‍ರಂ. . ) ______________________
2. ಕರಡಿ ( ಮುಖವನ್ನು ನೋಡಿಕೊಳ್ಳುತ್ತೇವೆ ) ______________________
3. ಕಟ್ಟಡ (ಕರ್ನಾಟಕದ ಭಾಷೆ ) ______________________